# ಅವನು ಅವಳಾಗುವ ಪರಿ

ಇತ್ತೀಚೆಗೆ ನಾನು ನೋಡಿದ ಒಂದು ಚಿತ್ರ ಸತತವಾಗಿ ಎಲ್ಲಿ ಹೋದರೂ ಅಲ್ಲಿ ಬಿಡದೆ ಕಾಡುತ್ತಿತ್ತು. ಕೆಲವು ಕವಿತೆಗಳು, ಕತೆಗಳು, ನೋಡಿದ ಸಂದರ್ಭಗಳು ಗಾಢವಾಗಿ ಕಾಡುತ್ತವೆ, ಮನಸ್ಸನ್ನು ಗಾಯಗೊಳಿಸುತ್ತವೆ. ಬಿಡದೆ ಬೆನ್ನತ್ತಿ ಸತಾಯಿಸುತ್ತವೆ. ಇಂತಹ ಒಂದು ಚಿತ್ರ 1920ರ ಸಂದರ್ಭದಲ್ಲಿ ಡೆನ್ಮಾರ್ಕ್‌ನಲ್ಲಿದ್ದ ಕಲಾವಿದ ದಂಪತಿ ಕುರಿತಾದದ್ದು.

ಇಬ್ಬರದೂ ಅನುರೂಪ ದಾಂಪತ್ಯ. ವೈಯಕ್ತಿಕವಾದ. ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ತರದ, ಪರಸ್ಪರರನ್ನು ಗೌರವಿಸುವ, ಪ್ರೀತಿಸುವ ಯಾವುದೇ ಶರತ್ತುಗಳು ಇಲ್ಲದ ಮುಕ್ತ ಜೀವನ. ಕಲಾವಿದರು ಹೇಗೆ ಬದುಕಬೇಕು ಎಂದು ನಿರೀಕ್ಷಿಸುತ್ತೇವೆಯೋ ಹಾಗೆ. ಚಿತ್ರದ ಹೆಸರು, 'ಡ್ಯಾನಿಶ್ ಗರ್ಲ್'. ಅವನು ಪ್ರಕೃತಿ ಕುರಿತಾದ ಚಿತ್ರಗಳಲ್ಲಿ ಸಿದ್ಧಹಸ್ತ. ಅವಳು ವ್ಯಕ್ತಿಚಿತ್ರಗಳಲ್ಲಿ ಹೆಸರು ಮಾಡಿದವಳು. ಪ್ರಖ್ಯಾತ ಕಲಾವಿದರಾದ ಕಾರಣ ಎಲ್ಲರ ಕಣ್ಣು ಅವರ ಮೇಲೆಯೇ. ಆದರೆ, 'ಆ ಒಂದು ದಿನ, ಒಂದು ಗಳಿಗೆ' ಅವರ ಬದುಕನ್ನು ಅಲ್ಲೋಲ ಕಲ್ಲೋಲ ಮಾಡಿ ಬಿಡುತ್ತದೆ.

ಒಂದು ದಿನ ಅವಳು ಚಿತ್ರಿಸುತ್ತಿದ್ದ ವ್ಯಕ್ತಿ ಚಿತ್ರದ ಮಾಡೆಲ್ ಒಬ್ಬಳು ವೈಯಕ್ತಿಕ ತೊಂದರೆಯಿಂದಾಗಿ ಸರಿಯಾದ ವೇಳೆಗೆ ಬರಲಾಗುವುದಿಲ್ಲ. ತನ್ನ ಕೆಲಸ ನಿಲ್ಲಿಸಲು ಇಷ್ಟ ಪಡದ ಅವಳು ತಾನು ಚಿತ್ರಿಸುತ್ತಿದ್ದ ಹೆಣ್ಣೊಬ್ಬಳ ಚಿತ್ರಕ್ಕೆ ಮಾಡೆಲ್ ಆಗಿ ಹೆಣ್ಣಿನ ಉಡುಗೆ ತೊಡುಗೆಯೊಂದಿಗೆ ಗಂಡನನ್ನೇ ಕುಳ್ಳಿರಿಸಿ ಕೊಳ್ಳುತ್ತಾಳೆ. ಅವನ ಪಾಲಿಗೆ ಅದೊಂದು ದಿವ್ಯ ಕ್ಷಣ, ಅವಳ ಪಾಲಿಗೆ ತಮ್ಮ ಸುಖಮಯ ದಾಂಪತ್ಯದ ಅಂತಿಮ ಕ್ಷಣ. ಗಂಡನೊಳಗಿದ್ದ ಹುಳುವೊಂದು ಚಿಟ್ಟೆಯಾಗಿ ಮಾರ್ಪಟ್ಟು ಹೊರಹಾಕುವಂತೆ ಅವನೊಳಗಿನ ಅವಳು ಮಾನಸಿಕವಾಗಿ, ದೈಹಿಕವಾಗಿ ಬಿಡುಗಡೆಗೊಂಡು ಮೂರ್ತರೂಪ ಪಡೆಯುತ್ತಾಳೆ. ಈ ಮಾರ್ಪಾಡಿನ ದೇಹಕ್ಕೆ ಅವನು 'ಲಿಲ್ಲಿ'ಯೆಂದು ಕರೆದುಕೊಳ್ಳುತ್ತಾನೆ. ಭಯ, ಸಂತಸಗಳ ನಡುವೆ ಅವನ ಮನಸ್ಸು ಜೀಕಿದರೆ ಅವಳು ಅವನನ್ನು ಕಳೆದುಕೊಳ್ಳುವ ಭಯದಲ್ಲಿ ತಲ್ಲಣಗೊಳ್ಳುತ್ತಾಳೆ.

ಚಿಕ್ಕ ವಯಸ್ಸಿನಿಂದಲೂ ಅಲ್ಲೊಮ್ಮೆ, ಇಲ್ಲೊಮ್ಮೆ ಕಾಡುವ ಹೆಣ್ಣ ಅನಿಸಿಕೆಗಳನ್ನು ಹತ್ತಿಕ್ಕುತ್ತಲೇ ಬಂದವನು ಅವನು. ಕಲೆಯ ಸಾಂಗತ್ಯ ಹಾಗೂ ವೈವಾಹಿಕ ಜೀವನದ ವೇಗದ ಬದುಕಿನಲ್ಲಿ ಈ ಸಂಘರ್ಷಗಳನ್ನು ಮರೆತವನು. ಒಂದು ಕ್ಷಣದ ಉಡುಗೆ–ತೊಡುಗೆ ಅವನ ಬದುಕನ್ನೇ ಬದಲಿಸಿತಲ್ಲದೆ ಆ ಭಾವಾವೇಗದ ಹಿಂದೆ ನಡೆಯಲಾರಂಭಿಸುತ್ತಾನೆ. ತನ್ನ ಹೆಂಡತಿಗೆ ತಿಳಿಯದಂತೆ ತನ್ನ ದೇಹವನ್ನು ಮತ್ತೆ ಮತ್ತೆ ನೋಡಿಕೊಳ್ಳುವುದು, ಹೆಣ್ಣುಡುಗೆಗಳನ್ನು ತೊಟ್ಟು ಸಂಭ್ರಮಿಸುವುದು. ಹೆಣ್ಣ ಮನಸ್ಸಿನ ಲೋಕವನ್ನು ಧರಿಸುವುದು. ಕೊನೆಗೆ ತನ್ನವಳನ್ನು ನೆನಸಿ ದುಃಖಿಸುವುದು– ಈ ಎಲ್ಲಾ ಭಾವಾವೇಗಗಳನ್ನು ತೃತೀಯ ಲಿಂಗಿಯಾಗಲೇಬೇಕಾದ ಅನಿವಾರ್ಯ ಆಯ್ಕೆ ಎಂಬಂತೆಯೇ ಅವನು ಅನುಭವಿಸುತ್ತಾನೆ.

ದಿನ ನಿತ್ಯದ ಬದುಕಿನಲ್ಲಿ ಇಬ್ಬರೂ ಎಂದಿನಂತಿದ್ದರೂ, ಜಗತ್ತಿಗೆ ಈ ಮಾರ್ಪಾಡುಗಳು ತಿಳಿಯದಿದ್ದರೂ ಅಂತರಂಗದ ಭಾವನಾ ಜಗತ್ತು ಕುಸಿಯ ತೊಡಗುತ್ತದೆ. ಅವನನ್ನು ಅಪಾರವಾಗಿ ಪ್ರೀತಿಸುವ ಅವಳು 'ಅವನೊಳಗಣ ಹೆಣ್ಣು 'ಲಿಲ್ಲಿ'ಯನ್ನು ತಾಳ್ಮೆಯಿಂದಲೇ ಸ್ವೀಕರಿಸುತ್ತಾಳೆ. ಉತ್ತಮ ಸಂಗಾತಿಯಾದ ಅವಳು ತಾಳ್ಮೆ, ಅನುಕಂಪ, ಸ್ನೇಹದಿಂದಲೇ ಅವನ ದ್ವಂದ್ವದ ಬದುಕನ್ನು ಒಪ್ಪಿಕೊಳ್ಳುತ್ತಾಳೆ. ಅವನೊಳಗಿನ 'ಲಿಲ್ಲಿ'ಯನ್ನು ಚಿತ್ರಿಸಿದ ಅವಳ ವ್ಯಕ್ತಿ ಚಿತ್ರಗಳು ಅಪಾರವಾದ ಹಣ ಮತ್ತು ಹೆಸರನ್ನು ತಂದುಕೊಡುತ್ತದಲ್ಲದೆ ಅವನ ದ್ವಂದ್ವದ ಬದುಕನ್ನು ಗೋಪ್ಯವಾಗಿ ಇಡುತ್ತದೆ.

ಈ ರೂಪಾಂತರದ ಬದುಕು ತಂದೊಡ್ಡುವ ಸಂಕಟಮಯ ಬದುಕನ್ನು ಅವನು ಸಂಭ್ರಮಿಸಿದ್ದಕ್ಕೆ ಅವಳು ಅವನನ್ನು ಕಳೆದುಕೊಳ್ಳುವ ಭಯದಲ್ಲಿ ನರಳುತ್ತಾಳೆ. ಅವನು ಅವಳಾಗುವ ಬಯಕೆಗಳಲ್ಲಿ ಬೇರೆಯ ಹೆಣ್ಣ ದೇಹಗಳನ್ನು, ಅವುಗಳ ದೈಹಿಕ ಸ್ವರೂಪಗಳನ್ನು, ಆಂಗಿಕ ಚಲನೆಗಳು, ಆವೇಗಗಳನ್ನು ತನ್ನೊಳಗೆ ತುಂಬಿಕೊಳ್ಳಲು ಆರಂಭಿಸುತ್ತಾನೆ. ಅವಳು ಈ ಎಲ್ಲಾ ಮಾರ್ಪಾಡುಗಳನ್ನು ಗಮನಿಸುತ್ತಲೇ, ದುಃಖಿಸುತ್ತಲೇ ಅವನ ಸಂಕಟ–ಸಂಭ್ರಮಗಳನ್ನು ಎದುರುಗೊಳ್ಳುತ್ತಲೇ, ಕ್ರಮೇಣ ಅವನ ಹೆಂಡತಿಗಿಂತ ಮಿಗಿಲಾಗಿ ಸ್ನೇಹಿತೆಯಂತೆ, ತಾಯಿಯಂತೆ ತನಗೆ ಅರಿವಿಲ್ಲದೆಯೇ ರೂಪಾಂತರಗೊಳ್ಳುತ್ತಾ ಹೋಗುತ್ತಾಳೆ. ಏನೆಲ್ಲಾ ರೂಪಾಂತರಗಳಾದರೂ ಇಬ್ಬರಿಗೂ ಪರಸ್ಪರರನ್ನು ಕಳೆದುಕೊಳ್ಳಲು ಇಷ್ಟವಿಲ್ಲ.

ಈ ಡೋಲಾಯಮಾನದ ಬದುಕನ್ನು ಕೊನೆಗಾಣಿಸಲು ಅವನು ನಿರ್ಧರಿಸಿ ಪೂರ್ತ ಹೆಣ್ಣಾಗಲು ಬಯಸಿ ಸರ್ಜರಿ ಮಾಡಿಸಿಕೊಳ್ಳುತ್ತಾನೆ. ಹೆಣ್ಣಾಗಿಯೇ ತನ್ನ ಪರಿಚಿತ ಪರಿಸರದಿಂದ ಆಚೆ ನಡೆದಾಡಲಾರಂಭಿಸುತ್ತಾನೆ. ತನ್ನ ಬದುಕು, ಕನಸುಗಳ ಬಗ್ಗೆ ಮಾತನಾಡಲಾರಂಭಿಸುತ್ತಾನೆ. ಅವನೊಳಗಿನ ಕಲಾವಿದನನ್ನು ಅವಳು ಎಚ್ಚರಿಸಲು ಪ್ರಯತ್ನಪಟ್ಟಾಗ ಅವನು 'ನಾನು ಕಲಾವಿದನಾಗುವುದಕ್ಕಿಂತ ನಾನು ನಾನಾಗುವುದೇ ಮುಖ್ಯ' ಎಂಬ ಖಚಿತ ನಿಲುವು ತಳೆಯುತ್ತಾನೆ. ಎರಡನೆಯ ಹಂತದ ಅಪಾಯಕಾರಿ ಸರ್ಜರಿಯಲ್ಲಿ ಪೂರ್ತಿ 'ಅವಳಾದರೂ' ಅವನು ಪ್ರಾಣದ ಹಂಗನ್ನು ತೊರೆದು ದ್ವಂದ್ವದ ಬದುಕಿನಿಂದ ಪರಲೋಕದ ಕಡೆಗೆ ಚಿಟ್ಟೆಯಾಗಿ ಹಾರುತ್ತಾನೆ.

ಇದೊಂದು ಚಲನಚಿತ್ರದ ಕತೆಯಾದರೂ ಇಂದಿಗೂ ಅತ್ಯಂತ ಪ್ರಸ್ತುತವಾದ, ಚರ್ಚಿಸಬೇಕಾದ ಸಂಗತಿ. ಎಷ್ಟೋ ದಾಂಪತ್ಯಗಳಲ್ಲಿ ಇಂತಹ ಮಾನಸಿಕ, ದೈಹಿಕ ಸಂಗತಿಗಳು ದೊಡ್ಡ ನ್ಯೂನತೆಯಾಗಿಯೇ ಕಾಣಲ್ಪಟ್ಟು ಬದುಕು ದುರಂತದ ಕಡೆಗೆ ನಡೆದು ಬಿಡುತ್ತದೆ. ಗಂಡ ಗಂಡಸಾಗಿಯೇ, ಹೆಣ್ಣು ಹೆಂಗಸಾಗಿಯೇ ಇರಬೇಕೆಂಬುದು ಲೋಕದ ಸಾಮಾನ್ಯ ನಿರೀಕ್ಷೆ. ಮನಃಶಾಸ್ತ್ರಜ್ಞರು ಹೇಳಿದಂತೆ ಅವನೊಳಗೆ ಅವನು, ಅವನೊಳಗೆ ಅವಳು ಸದಾ ಬೆನ್ನ ಹಿಂದಿನ ನೆರಳಿನಂತೆ ಇದ್ದೇ ಇರುತ್ತಾರೆ. ಸಮಯಾಸಮಯಗಳಲ್ಲಿ ಇದ್ದಕ್ಕಿದ್ದಂತೆ ಒಂದೊಂದು ಬಾರಿ ನೆರಳುಗಳೇ ಪ್ರಧಾನವಾದಾಗ, ಹೊರ ಬಂದಾಗ ಇಂತಹ ಬಿಕ್ಕಟ್ಟುಗಳು ಎದುರಾಗುತ್ತವೆ. ಆದರೆ ಅವರ ಜೊತೆಗಿನ ಸಂಗಾತಿಗಳು, ತಾಯಿತಂದೆ ಸುತ್ತಲಿನ ಸಮಾಜ ಅದೊಂದು ನ್ಯೂನತೆ ಎಂದು ಪರಿಗಣಿಸದೆ ಅವರ ಜೊತೆಯಲ್ಲಿ ನಿಂತು ಅದರಿಂದ ಹೊರಬರಲು ಕೈಚಾಚಬೇಕಷ್ಟೆ. ಆಗ ಅವರು ಅವರಾಗಿಯೇ ಬದುಕಬಹುದಾದ ಪರ್ಯಾಯ ಸಮಾಜವೊಂದು ತಾನಾಗಿಯೇ ನಿರ್ಮಿತಗೊಳ್ಳುತ್ತದೆ. ಮುಖ್ಯವಾಹಿನಿಯೂ ಅವರನ್ನು ತನ್ನೊಳಗೆ ಸೇರಿಸಿಕೊಂಡು ಬದುಕುವ ಸಾಧ್ಯತೆಗಳು ತೆರೆದುಕೊಳ್ಳುತ್ತವೆ.

■ **ಅಮೃತಮತಿ**

## ಮಾತೇ ಮುತ್ತು

★ ಶಿಕ್ಷಣ ಅತ್ಯಂತ ಶಕ್ತಿಶಾಲಿ ಆಯುಧ. ಅದರಿಂದ ನೀವು ಜಗತ್ತನ್ನು ಬದಲಾಯಿಸಬಹುದು.

—ನೆಲ್ಸನ್ ಮಂಡೇಲ

★ ಪ್ರೀತಿ ಅಲ್ಪಾವಧಿ; ಮರೆಯುವುದು ದೀರ್ಘಾವಧಿ.

—ಪಾಬ್ಲೊ ನೆರೂಡ

★ ದುಃಖಕ್ಕೆ ಸಿಕ್ಕಷ್ಟು ಶೀಘ್ರ ಕಾರಣಗಳು ಸುಖಕ್ಕೆ ಸಿಗುವುದಿಲ್ಲ.

—ಪಿ. ಲಂಕೇಶ್

★ ಎಂಥ ಪೋಲಿ ಆತ್ಮ ನನ್ನದು, ಜಗತ್ತಿನ ತುಂಬೆಲ್ಲಾ ತಿರುಗಾಡಿ, ನನ್ನ ಮಗ್ಗುಲಲ್ಲಿರುವುದನ್ನೇ ನೋಡಲಿಲ್ಲ.

—ಚಾರ್ಲ್ಸ್ ಬೋದಿಲೇರ್

★ ಇತಿಹಾಸವೆಂಬುದು ಕೇವಲ ರಾಜ ರಾಣಿಯರ ಕಥೆಯಲ್ಲ , ಕಾಲಕಾಲಕ್ಕೆ ಬದಲಾಗುತ್ತಾ ಬಂದ ಬದುಕು.

—ನಿರಂಜನ

★ ಲೋಕದಲ್ಲಿ ಎಷ್ಟು ಜನರಿದ್ದಾರೋ ಅಷ್ಟು ಅನುಭವಗಳಿವೆ.ಅವುಗಳಲ್ಲಿ ಕೆಲವು ಗ್ರಾಹ್ಯವಾದವು, ಕೆಲವು ತ್ಯಾಜ್ಯ ಎಂದು ನಿರ್ಧಾರ ಮಾಡುವ ಒರೆಗಲ್ಲು ಯಾವುದು? ಅವರವರ ಸ್ವಂತ ಅನುಭವವೇ!

—ಜಿ.ಪಿ.ರಾಜರತ್ನಂ

★ ಒಬ್ಬ ಮನುಷ್ಯ, ಆತನ ಸ್ನೇಹಿತರು ಹಾಡಿ ಹೊಗಳುವಷ್ಟು ಒಳ್ಳೆಯವನೂ ಇರುವುದಿಲ್ಲ, ಅವನಿಗಾಗದವರು ತೆಗಳಿ ತಿರಸ್ಕರಿಸುವಷ್ಟು ಕೆಟ್ಟವನೂ ಇರುವುದಿಲ್ಲ.

—ಮಾಸ್ತಿ ವೆಂಕಟೇಶ ಅಯ್ಯಂಗಾರ್